# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

## <u>ಸಿ.ಸಿಃ 27/2024</u>

ಫ್ರಾಸಾ-3, ಚಾಸಾ-4

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಸ್ವಾಮಿ |
| ತಂದೆಯ ಹೆಸರು | : | ಕೆಂಪಸಿದ್ದ |
| ವಯಸ್ಸು | : | 38ವರ್ಷ |
| ಉದ್ಯೋಗ | : | SDA, ನಗರ ಸಭೆ, ಚಾಮರಾಜನಗರ |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕಃ 10.02.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು 2021 ರಿಂದ ಚಾಮರಾಜನಗರ ನಗರಸಭೆಯಲ್ಲಿ SDA ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 04.08.2023 ರಂದು ಬೆಳಿಗ್ಗೆ ಸುಮಾರು 10.20 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಜೊತೆಗೆ ನಮ್ಮ ಕಚೇರಿಯ SDA ವಿಶ್ವನಾಥ ನಮ್ಮ ಕಚೇರಿಯಲ್ಲಿದ್ದಾಗ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ಯ PSI ಸುನೀಲರವರು ನಮ್ಮ ಕಚೇರಿಗೆ ಬಂದು ಪೌರಾಯುಕ್ತರನ್ನು ಭೇಟಿ ಮಾಡಿ ಮೂಕನಪಾಳ್ಯ ಗ್ರಾಮದಲ್ಲಿ ಶಿವಕುಮಾರ ಬಿನ್ ನಾಗನಾಯಕ ಎಂಬುವವರು ಅಕ್ರಮವಾಗಿ ಗಾಂಜಾ ಮತ್ತು ಮದ್ಯವನ್ನು ಸಂಗ್ರಹಿಸಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ಈ ಬಗ್ಗೆ ದಾಳಿ ಮಾಡಬೇಕಾಗಿರುವುದರಿಂದ ನಿಮ್ಮ ಕಚೇರಿಯಿಂದ ಇಬ್ಬರು ನೌಕರರನ್ನು ಪಂಚಾಯ್ತುದಾರರಾಗಿ ಕಳುಹಿಸಿಕೊಡುವಂತೆ ನಮ್ಮ ನಗರಸಭೆಯ ಪೌರಯುಕ್ತರನ್ನು ಕೇಳಿಕೊಂಡಿರುತ್ತಾರೆ. ಆಗ ನಮ್ಮ ನಗರಸಭೆಯ ಪೌರಯುಕ್ತರು ನನಗೂ ಮತ್ತು ಚಾಸಾ-

3ರವರನ್ನು ಪೊಲೀಸರವರ ಜೊತೆ ಹೋಗಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ, ಅದರಂತೆ ನನಗೆ ಮತ್ತು ಚಾಸಾ-3ರವರಿಗೆ ಪೊಲೀಸರು ನೋಟಿಸ್ ನೀಡಿ ತಮ್ಮ ಜೊತೆ ಸಮಯ 10.30 ಗಂಟೆಯ ಸಮಯದಲ್ಲಿ ನಮ್ಮನ್ನು ಜೀಪಿನಲ್ಲಿ ಕರೆದುಕೊಂಡು ಹೋಗುವ ಮುಂಚೆ ಪರಸ್ಪರ ಅಂಗಶೋಧನೆ ಮಾಡಿಕೊಂಡು, ಆಗ ನಮ್ಮಗಳ ಯಾರ ಬಳಿಯಲ್ಲಿಯೂ ಗಾಂಜಾವಾಗಲೀ ಅಥವಾ ಮದ್ಯದ ಪೌಚ್‌ಗಳು ದೊರೆಯಲಿಲ್ಲ, ಆಗ ಸಮಯ 10.30ಕ್ಕೆ ನಾನು ಚಾಸಾ-3ರವರು ಮತ್ತು ಚಾಸಾ-1 ಮತ್ತು ಅವರ ಸಿಬ್ಬಂದಿಗಳು ಹಾಗೂ ಚಾಸಾ-2 ರವರು ಇಲಾಖಾ ಜೀಪಿನಲ್ಲಿ ಹರದನಹಳ್ಳಿ ಮತ್ತು ಚಿಕ್ಕಹೊಳೆ ಮಾರ್ಗವಾಗಿ ಕುಂಬಾರಗುಂಡಿಗೆ ಹೋಗಿ ಮೂಕನಪಾಳ್ಯನ ತಿರುವಿನಲ್ಲಿ ಸ್ವಲ್ಪ ಮುಂದೆ ಹೋದಾಗ ಅಲ್ಲಿ ಒಂದು ತೋಟದ ಮನೆಯಲ್ಲಿ ನಾವುಗಳು ಹೋದಾಗ ಅಲ್ಲಿದ್ದ ಒಬ್ಬ ಆಸಾಮಿಯು ನಮ್ಮಗಳನ್ನು ಕಂಡು ಓಡಲು ಪ್ರಾರಂಭಿಸಿದ.

ಓಡುತ್ತಿದ್ದ ವ್ಯಕ್ತಿಯನ್ನು ನಮ್ಮ ಜೊತೆ ಇದ್ದ ಪೊಲೀಸರಾದ ಚಾಸಾ-7 ಮತ್ತು 8ರವರು ಹಿಡಿದುಕೊಂಡು ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು ಚಾಸಾ-1ರವರು ತಮಗೆ ಅಕ್ರಮವಾಗಿ ಗಾಂಜಾ ಮತ್ತು ಮದ್ಯವನ್ನು ಸಂಗ್ರಹಿಸಿಟ್ಟಿರುವ ಮಾಹಿತಿ ಬಂದಿದ್ದು, ಮೇಲಾಧಿಕಾರಿಯಿಂದ ಅನುಮತಿ ಪಡೆದು ಬಂದಿರುವುದಾಗಿ ನಮ್ಮ ಜೊತೆ ಪತ್ರಾಂಕಿತ ಅಧಿಕಾರಿಯಾದ ಚಾಸಾ-2ರವರು ಬಂದಿರುವುದಾಗಿ ತಿಳಿಸಿ, ಶೋಧನೆ ಮಾಡಲು ಸಹಕಾರ ನೀಡಬೇಕೆಂದು ತಿಳಿಸಿದರು.

ನಂತರ ಮನೆಯ ಹತ್ತಿರ ಪರಿಶೀಲಿಸಿದಾಗ ಮನೆಯ ಸೀಟಿನ ಮೇಲ್ಚಾವಣಿಯ ರೂಮಿನಲ್ಲಿ ವ್ಯವಸಾಯ ಸಲಕರಣೆಗಳು ಇಟ್ಟಿದ್ದ ರೂಮಿನಲ್ಲಿ ನೋಡಿದಾಗ ರೂಮಿನಲ್ಲಿ ಮೂರು ರಟ್ಟಿನ ಬಾಕ್ಸಗಳಿದ್ದವು ಮತ್ತು ಅದರ ಪಕ್ಕ ಒಂದು ಪ್ಲಾಸ್ಟಿಕ್ ಕವರಿತ್ತು, ಅದನ್ನು ಮನೆಯ ಹೊರಗಡೆ ತಂದು ಪರಿಶೀಲಿಸಿದಾಗ ಪ್ಲಾಸ್ಟಿಕ್ ಕವರಿನಲ್ಲಿ ಒಣಗಿದ ಗೊಂಡೆ ಗಾಂಜಾ ಇರುವುದು ಕಂಡುಬಂತು. ಅದನ್ನು ಡಿಜಿಟಲ್ ತೂಕದ ಯಂತ್ರದಿಂದ ತೂಕ ಮಾಡಿದಾಗ 544 ಗ್ರಾಂ ತೂಕ ಇತ್ತು. ಅದನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಜಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ಮೂರು ರಟ್ಟಿನ

ಬಾಕ್ಸಗಳನ್ನು ತೆರೆದು ನೋಡಿದಾಗ ವಿವಿಧ ಕಂಪನಿಯ ಒಟ್ಟು 216 ಮದ್ಯದ ಪೌಚಗಳಿದ್ದವು, ಅವುಗಳ ಪೈಕಿ ಒಟ್ಟು 27 ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲ್ ಪಡೆದು ಅದನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಜಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ ಮಃ 1 ಗಂಟೆಯಿಂದ 3 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಲಾಯಿತು. ಸದರಿ ಮಹಜರ್ ನ್ನು ಈಗ ನಾನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಟ್ಟು 27 ಮದ್ಯದ ಟೆಟ್ರಾಪ್ಯಾಕ್ ಗಳನ್ನು ನೋಡಿ ಗುರ್ತಿಸಿರುತ್ತಾರೆ, ಅವುಗಳನ್ನು ಈಗಾಗಲೇ ಒಟ್ಟಾಗಿ M.O-1(ಬಿ) ಎಂದು ಗುರುತಿಸಲಾಯಿತು. ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದರಿಂದ ಮು.ಮಾ -1 ರಲ್ಲಿರುವ 27 ಟೆಟ್ರಾಪ್ಯಾಕ್‌ಗಳ ಮೇಲೆ ಇರುವ ಸಹಿಯನ್ನು ಮು.ಮಾ-27(1) ರಿಂದ (27) ಎಂದು ಗುರುತಿಸಲಾಯಿತು.

ಮೂರು ರಟ್ಟಿನ ಬಾಕ್ಸಗಳನ್ನು ಈಗ ನಾನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ M.O-2 ಎಂದು ನ್ಯಾಯಾಲಯದ ಮುಂದೆ ಗುರುತಿಸಲಾಗಿದೆ. ಈಗ ನಾನು ನೋಡುತ್ತಿರುವ ಒಂದು ಫೋಟೋವನ್ನು ರೂಮಿನಿಂದ ಕವರಿನಲ್ಲಿದ್ದ ಗಾಂಜಾವನ್ನು ಹೊರಗೆ ತೆಗೆದುಕೊಂಡು ಬರುವಾಗ ತೆಗೆದ ಫೋಟೋವಾಗಿರುತ್ತದೆ ಎಂದು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಈಗ ನಾನು ನೋಡುತ್ತಿರುವ 2 ಫೋಟೋಗಳು ಮಹಜರ್ ಸಮಯದಲ್ಲಿ ಮತ್ತು ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ತೆಗೆದ ಫೋಟೋಗಳಾಗಿರುತ್ತವೆ ಎಂದು ಸಾಕ್ಷಿಯು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ಸಾಕ್ಷಿಯು ಆ ದಿನ ನೀಡಿದ ನೋಟಿಸನ್ನು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ. ಈ ವಿಚಾರವಾಗಿ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಆ ದಿನ ಚಾಸಾ-1ರವರು ನನ್ನ ಜೊತೆ ಮನೆಯ ಅಂಗಳ ಕೊಟ್ಟಿಗೆ, ರೊಂಗಳು ಇತ್ಯಾದಿ ಕಡೆ ಪರಿಶೀಲಿಸಿ, ನಂತರ ಒಂದು ಸೀಟಿನ ಮೇಲ್ಚಾವಣೆಯ ಹಿಂಭಾಗದ ಕೃಷಿ ಸಲಕರಣೆಗಳು ಇದ್ದ ಸ್ಥಳದಲ್ಲಿ ಪರಿಶೀಲಿಸಿರುತ್ತಾರೆ ಎಂದರೆ ಸರಿ. ರೂಮಿನ ಸ್ಥಳದಲ್ಲಿ ದೊರತೆ ಗಾಂಜಾ ಇದ್ದ ಕವರ್ ಮತ್ತು ಮದ್ಯದ ಪೌಚ್‌ಗಳಿದ್ದ ಬಾಕ್ಸಗಳನ್ನು ರೂಮಿನಿಂದ ಯಥಾಸ್ಥಿತಿಯಲ್ಲಿ ಮನೆಯ ಮುಂಭಾಗಕ್ಕೆ ತರಲಾಯಿತು ಎಂದರೆ ಸರಿ. ಈ ಬಗ್ಗೆ ಚಾಸಾ-1ರವರು ಲ್ಯಾಪಟಾಪ ನಲ್ಲಿ ಸ್ವ ವರದಿಯನ್ನು ತಯಾರಿಸಿ ಜೊತೆಯಲ್ಲಿ ಪ್ರಿಂಟರನಿಂದ ಪ್ರಿಂಟ್ ತೆಗೆಸಿ ಚಾಸಾ-8ರವರ ಮೂಲಕ ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟರು ಎಂದರೆ ಸರಿ.

**ಪಾಟೀಸವಾಲುಃ ಶ್ರೀ. ಎ.ಎಸ್.ಎಸ್.ಆರ್. ವಕೀಲರಿಂದಃ**

ಪೊಲೀಸನವರು ನನಗೆ ನೋಟಿಸ್ ಯಾವಾಗ ಕೊಟ್ಟರು ಎಂದು ಇಲ್ಲ ಎಂದರೆ ಸರಿ. ಚಾಮರಾಜನಗರ ಬಿಟ್ಟಾಗ ಸುಮಾರು 10.30 ಗಂಟೆ ಸಮಯ ಆಗಿತ್ತು. ಸ್ಥಳ ತಲುಪಿದಾಗ 11 ಗಂಟೆ ಆಗಿರುತ್ತದೆ. ಮಹಜರ್ ನ್ನು 1 ಗಂಟೆಯಿಂದ 3 ಗಂಟೆಯವರೆಗ ಬರೆದಿರುತ್ತಾರೆ. 11 ರಿಂದ 1 ಗಂಟೆಯವರೆಗೆ ಟೆಟ್ರಾಪ್ಯಾಕ್ ಮತ್ತು ಗಾಂಜಾವನ್ನು ಪರಿಶೀಲನೆ ಮಾಡುತ್ತಿದ್ದೇವು. 2 ಗಂಟೆಯವರೆಗೂ ಪರಿಶೀಲನೆ ಮಾಡುತ್ತಿದ್ದೇವು. ಮಹಜರ್ ನಡೆದ ಸ್ಥಳದಲ್ಲೇ ಮಹಜರ್ ನ್ನು ಪ್ರಿಂಟ್ ತೆಗೆದಿರುತ್ತಾರೆ. ಮಹಜರನಲ್ಲಿ ಅಂಗಶೋಧನೆ ಮತ್ತು ವಾಹನ ಶೋದನೆ ಬಗ್ಗೆ ನಮೂದು ಇಲ್ಲ ಆದರೆ ಹೇಳಿಕೆಯಲ್ಲಿ ಇರುತ್ತದೆ. ನಾವುಗಳು ಅಂಗಶೋಧನೆ ನಗರಸಭೆ ಹತ್ತಿರ ಜೀಪ ಹತ್ತ ಬೇಕಾದರೇ

ಮಾಡಿಕೊಂಡಿದ್ದೇವೆ. ಅಂಗಶೋದನೆ ಬಗ್ಗೆ ಮಹಜರ್  ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಮನೆಯ ನಂಬರ್ ನೆನಪಿಲ್ಲ.

ಮನೆಯ ದಾಖಲಾತಿ ಯಾರ ಹೆಸರಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಮನೆಯ ನಂಬರ ಇರುವುದಿಲ್ಲ, ಅದು ತೋಟದ ಮನೆಯಾಗಿರುತ್ತದೆ. ಮಹಜರ್ ನಲ್ಲಿ ಅಂಗಶೋಧನೆ ಮತ್ತು ವಾಹನ ಶೋಧನೆ ಬಗ್ಗೆ ಬರೆದಿಲ್ಲ. ಟೆಟ್ರಾಪ್ಯಾಕ್‌ಗಳ ಬ್ಯಾಚ್ ನಂಬರ್ ಮತ್ತು ಸೀರಿಯಲ್ ನಂಬರ್ ಮಹಜರ್ ನಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.  ನಾನು ಯಾವುದೇ ಸ್ಥಳಕ್ಕೂ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.